# BMS

# INSTITUTE OF TECHNOLOGY AND MANAGEMENT

Avalahalli, Doddaballapur Main Road, Bengaluru – 560064

## Awareness Drive (E-Waste)

## BMSIT&M Eco Club - OIKOS

### ಬಿಎಂಎಸ್ ಐಟಿಯಿಂದ ಜಾಗೃತಿ ಡ್ರೈವ್

Varsha/BMSIT

ಯಲಹಂಕದ ಬಿಎಂಎಸ್ ಐಟಿ ಕಾಲೇಜಿನ ಇಕೋ ಕ್ಲಬ್‌ನ oikos ಸದಸ್ಯರು ಸಮಾಜದಲ್ಲಿ ಅರಿವು ಮೂಡಿಸುವ 'ಇ-ತ್ಯಾಜ್ಯ' ಕುರಿತ ಜಾಗೃತಿ ಕಾರ್ಯವೊಂದನ್ನು ಕೈಗೊಂಡಿದ್ದಾರೆ.

'ಓಯಿಕೋಸ್' ತಂಡವು ಸುಮಾರು ಮೂರು ತಿಂಗಳ ಕಾಲ ಈ ಸಮಾಜಮುಖಿ ಕೆಲಸವನ್ನು ಮಾಡಿತ್ತು. ಅಕ್ಟೋಬರ್‌ನಿಂದ ಡಿಸೆಂಬರ್‌ವರೆಗೆ ಸಂಪೂರ್ಣ ಬೆಂಗಳೂರು ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಎಲೆಕ್ಟ್ರಾನಿಕ್ ತ್ಯಾಜ್ಯದ ಕುರಿತು ಜಾಗೃತಿ ಮೂಡಿಸಿದ್ದಲ್ಲದೆ ಇ-ತ್ಯಾಜ್ಯ ಸಂಗ್ರಹಣೆಯನ್ನೂ ಯಶಸ್ವಿಯಾಗಿ ಆಯೋಜಿಸಿತ್ತು. ಈ ಕಾರ್ಯದಲ್ಲಿ ಸುಮಾರು 650 ಕೆಜಿಯಷ್ಟು ಇ-ವೇಸ್ಟ್ ಅನ್ನು ಸ್ಥಳೀಯ ನಾಗರಿಕರಿಂದ, ಸಾರ್ವಜನಿಕರಿಂದ ಸಂಗ್ರಹಿಸಲಾಯಿತು. ಹೀಗೆ ಸಂಗ್ರಹಿಸಲಾದ ತ್ಯಾಜ್ಯವನ್ನು ಜನವರಿ 3ರಂದು ಹೊಸದೆಹಲಿ ಮೂಲದ ಮಾಲಿನ್ಯ ಮಂಡಳಿಯ ಅನುಮೋದಿತ ಅಧಿಕೃತ ಸಂಸ್ಥೆಯಾದ 'ನವೋ ಇ-ವೇಸ್ಟ್ ನಿರ್ವಹಣಾ ಲಿಮಿಟೆಡ್'ಗೆ ಹಸ್ತಾಂತರಿಸಲಾಯಿತು.

ಬಿಎಂಎಸ್ ಐಟಿ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕ ವೃಂದದವರು ಈ ಕಾರ್ಯದಲ್ಲಿ ಕೈಜೋಡಿಸಿದ್ದು ಇ-ವೇಸ್ಟ್ ವಿಲೇವಾರಿ ಮತ್ತು ಅದರ ನಿರ್ವಹಣೆ, ಮರು ಬಳಕೆಯ ಅಗತ್ಯದ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡಿದರು. ■



**ನೀವು ಕೂಡ ಕ್ಯಾಂಪಸ್ ವರದಿಗಾರರಾಗಿ :** ಈಗಾಗಲೇ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ವಿಜಯ ಕರ್ನಾಟಕ ಕ್ಯಾಂಪಸ್ ವರದಿಗಾರರಾಗಿದ್ದಾರೆ. ನೀವೂ ಇಂತಹ ವರದಿಗಾರರಾಗಬೇ
ನಿಮ್ಮ ವಿವರಗಳನ್ನು ಸಂಕ್ಷಿಪ್ತವಾಗಿ ವಾಟ್ಸಾಪ್ ಮಾಡಿ. ನಾವು ನಿಮ್ಮನ್ನು ಸಂಪರ್ಕಿಸುತ್ತೇವೆ. 8880852240